**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 54/2023**

**ಚಾ.ಸಾಃ 6, ಪ್ರಾ.ಸಾಃ 5**

| | |
|---|---|
| ಸಾಕ್ಷಿದಾರನ ಹೆಸರು | ಗಣಪ ನಾಯ್ಕ |
| ತಂದೆಯ ಹೆಸರು | ನಾರಾಯಣ ನಾಯ್ಕ |
| ವಯಸ್ಸು | 52 ವರ್ಷಗಳು |
| ಉದ್ಯೋಗ | ತೋಟದ ಕೆಲಸ |
| ವಾಸ್ತವ್ಯ | ದಿಬ್ಬಣಗಲ್, ತಾಃ ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 17-12-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿದ್ದೇನೆ.

ಈಗ್ಗೆ 2 ವರ್ಷಗಳ ಹಿಂದೆ ಚಾಸಾ-1 ರವರ ಮನೆಯಲ್ಲಿ ಕಳ್ಳತನ ಆಗಿತ್ತು. ಸದರಿ ವಿಚಾರವಾಗಿ ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದು ನಾನು ಹೋಗಿದ್ದು, ಪೋಲೀಸರು ಅಲ್ಲಿ ಈಗ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ತೋರಿಸಿ ಆತನನ್ನು ಮತ್ತು ನಮ್ಮ ಕರೆದುಕೊಂಡು ಚಾಸಾ-1 ರವರ ಮನೆಯ ಹತ್ತಿರ ಕರೆದುಕೊಂಡು ಹೋದರು. ಅಲ್ಲಿ ಆರೋಪಿ ಚಾಸಾ-1 ರವರ ಮನೆಯ ಹಂಚನ್ನು ತೋರಿಸಿ ನಾನು ಅಲ್ಲಿಂದ ಮನೆಯ ಒಳಕ್ಕೆ ಹೋಗಿ ಹಣ ಕಳ್ಳತನ ಮಾಡಿರುವುದಾಗಿ ತೋರಿಸಿದನು. ಪೋಲೀಸರು ಆ ಕಾಲಕ್ಕೆ ಫೋಟೋ ತೆಗೆಸಿ ಒಂದು ಪಂಚನಾಮೆಗೆ ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಚಾಸಾ-7 ರವರೂ ಸಹ ಹಾಜರಿದ್ದು ಪಂಚನಾಮೆಗೆ ಸಹಿ ಹಾಕಿರುತ್ತಾರೆ. ಸದರಿ ಪಂಚನಾಮೆಯನ್ನು ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-8 ಎಂದು, ಸಾಕ್ಷಿ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಫೋಟೋಗಳನ್ನು ನೋಡುತ್ತಿದ್ದು ನಿಪಿ-4 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಯು. ಬಿ. ನಾಯ್ಕರಿಂದಃ**

ಚಾಸಾ-1 ಬಹಳ ವರ್ಷಗಳಿಂದ ಪರಿಚಯ, ನಾನು ಅವರ ಮನೆಯಲ್ಲಿ ಕೆಲಸ ಮಾಡಿದ್ದೇನೆ. ಈ ದಿನ ಅವರೂ ಸಹ ಕೋರ್ಟಿಗೆ ಬಂದಿದ್ದಾರೆ. ನನ್ನನ್ನು ಠಾಣೆಗೆ ಬರುವಂತೆ ಪೋಲೀಸರು ಕರೆದಿರುತ್ತಾರೆ. ಮಧ್ಯಾಹ್ನ 01-30 ರ ಸಮಯಕ್ಕೆ ಪೋಲೀಸರು ನನ್ನ ಮೊಬೈಲಿಗೆ ಫೋನ್ ಮಾಡಿ ಕರೆದಿರುತ್ತಾರೆ. ನನ್ನ ನಂಬರ್ ಪೋಲೀಸರ ಬಳಿ ಹೇಗೆ ಬಂದಿತ್ತೋ ನನಗೆ ಗೊತ್ತಿಲ್ಲ. ಅದಕ್ಕೂ ಮೊದಲು ನಾನು ಪೋಲೀಸ್ ಠಾಣೆಗೆ ಹೋಗಿರಲಿಲ್ಲ ಮತ್ತು ನನ್ನ ನಂಬರ್ ಕೊಡಲಿಲ್ಲ. ಆ ದಿನ ನಾನು ಕೆಲಸಕ್ಕೆ ಹೋಗಿರಲಿಲ್ಲ, ಮನೆಯಲ್ಲಿದ್ದೆ. ಪೋಲೀಸರು ಫೋನ್ ಮಾಡಿದಾಗಲೇ ಚಾಸಾ-1 ರವರ ಮನೆಯಲ್ಲಿ ಕಳ್ಳತನ ಮಾಡಿದ

ಆರೋಪಿ ಹಿಡಿದಿದ್ದೇವೆ ಬಾ ಎಂದು ಹೇಳಿರುತ್ತಾರೆ. ಆಗ ನಾನು ಮತ್ತು ಚಾಸಾ-7 ಒಟ್ಟಿಗೇ ಪೋಲೀಸ್ ಠಾಣೆಗೆ ಹೋಗಿರುತ್ತೇವೆ. ಚಾಸಾ-1ರವರ ಮನೆಯ ಕಳ್ಳತನದ ವಿಚಾರಕ್ಕೆ ಪೋಲೀಸ್ ಠಾಣೆಗೆ ಹೋಗೋಣ ಬಾ ಎಂದು ಚಾಸಾ-7ರವರೇ ನನಗೆ ಕರೆದು ಅದರಂತೆ ಠಾಣೆಗೆ ಕರೆದುಕೊಂಡು ಬಂದಿರುತ್ತಾರೆ. ಪೋಲೀಸ್ ಠಾಣೆಯಲ್ಲಿ ನನ್ನ ಸಮಕ್ಷಮ ಯಾವುದೇ ಬರವಣಿಗೆ ಮಾಡಿಲ್ಲ. ನನ್ನ ಸಮಕ್ಷಮ ಪೋಲೀಸರು ಆರೋಪಿಯ ಸಹಿಯನ್ನು ತೆಗೆದುಕೊಂಡಿಲ್ಲ, ನಾನೂ ಸಹ ಯಾವುದೇ ಸಹಿ ಮಾಡಿಲ್ಲ. ನಾನು ಪೋಲೀಸ್ ಠಾಣೆಗೆ ಬಂದಾಗ 01-30 ರಿಂದ 01-45 ಆಗಿತ್ತು. ಪೋಲೀಸ್ ಠಾಣೆಯಲ್ಲಿ ಪೋಲೀಸರು ನನಗೆ ಯಾವುದೇ ಬೈಕನ್ನು ತೋರಿಸಲಿಲ್ಲ. ನಾನು ಪುನಃ ಪೋಲೀಸ್ ಠಾಣೆಯಿಂದ ಚಾಸಾ-1ರವರ ಮನೆಗೆ ಹೋದಾಗ ಸಂಜೆ 04-30 ರಿಂದ 05-00 ಗಂಟೆ ಆಗಿತ್ತು. ಚಾಸಾ-1ರವರ ಮನೆಯಲ್ಲಿ ಪಂಚನಾಮೆಯನ್ನು ಹೀಗೆ ಬರೆಯಬೇಕು ಎಂದು ನಾನು ಮಾಹಿತಿ ನೀಡಿರುವುದಿಲ್ಲ. ಚಾಸಾ-1ರವರ ಮನೆಯ ಹತ್ತಿರ ಪೋಲೀಸರು ಬಂದಿದ್ದರಿಂದ ಪಂಚನಾಮೆಗೆ ಸಹಿ ಹಾಕುವಂತೆ ಹೇಳಿ ಪಂಚನಾಮೆಗೆ ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಪಂಚನಾಮೆಗೆ ಸಹಿ ತೆಗೆದುಕೊಂಡ ನಂತರ ಪೋಲೀಸರು ಠಾಣೆಗೆ ಹೋಗಿರುತ್ತಾರೆ, ನಾನು ಮನೆಗೆ ಹೋಗಿರುತ್ತೇನೆ. ನಾನು ಚಾಸಾ-1ರವರ ಮನೆಯಿಂದ ಹೊರಟಾಗಿ 05-45 ಆಗಿತ್ತು. ಆರೋಪಿಯನ್ನು ತೋರಿಸಿ ಪೋಲೀಸರೇ ಚಾಸಾ-1ರವರ ಮನೆಯ ಹಂಚು ಮತ್ತು ಟಿವಿಯನ್ನು ತೋರಿಸಿದರು ಎಂದರೆ ಸರಿ. ಚಾಸಾ-1ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**